**<u>ಸಾಕ್ಷಿಯನ್ನು ದಿನಾಂಕ:24.02.2026 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು: 1 ಮತ್ತು 2ನೇ ಪ್ರತಿವಾದಿ ಪರ ಶ್ರೀ. ಎಂ ಎ ಸಿ ವಕೀಲರಿಂದ:</u>**

1970 ರಲ್ಲಿ ನನ್ನ ತಂದೆ ಅವರ ಸಹೋದರರೊಂದಿಗೆ ವಿಭಾಗವಾದ ನಂತರ ನನ್ನ ತಂದೆ ಮತ್ತು ನಾವೆಲ್ಲಾ ಸಹೋದರರು ಅವಿಭಕ್ತ ಕುಟುಂಬದಲ್ಲಿ ವ್ಯವಹಾರ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾವೆಲ್ಲಾ ಸಹೋದರರು 1970 ರಿಂದಲೂ ಪ್ರತ್ಯೇಕ ವ್ಯವಹಾರ ಮಾಡುತ್ತಿದ್ದೇವೆ. 1970 ರಲ್ಲಿ 1ನೇ ಪ್ರತಿವಾದಿಗೆ 18 ವರ್ಷ ಇರಬಹುದು. ನನ್ನ ವಾದ ಪತ್ರದ ಪ್ರಕಾರ 1ನೇ ಪ್ರತಿವಾದಿಗೆ 1970 ರಲ್ಲಿ 1 ವರ್ಷ ಇತ್ತು ಎಂದರೆ ಸರಿಯಲ್ಲ. ನನ್ನ ವಾದ ಪತ್ರದ ಪ್ರಕಾರ 2 ಪ್ರತಿವಾದಿಗೆ 1970 ರಲ್ಲಿ 1 ವರ್ಷ ಅಥವಾ ಅವರು ಹುಟ್ಟಿರಲಿಲ್ಲ ಎಂದರೆ ಸಾಕ್ಷಿಯು ಜನ್ಮ ದಿನಾಂಕ ಇರಲಿಲ್ಲ, ವ್ಯತ್ಯಾಸ ಆಗಿರಬಹುದು ಎಂದು ನುಡಿಯುತ್ತಾರೆ. ಅದೇ ರೀತಿ ನನ್ನ ವಾದ ಪತ್ರದ ಪ್ರಕಾರ 3 ಮತ್ತು 6 ಪ್ರತಿವಾದಿಗಳು 1970 ರಲ್ಲಿ ಹುಟ್ಟಿರಲಿಲ್ಲ ಎಂದರೆ ಸಾಕ್ಷಿಯು ಜನ್ಮ ದಿನಾಂಕ ಇರಲಿಲ್ಲ, ವ್ಯತ್ಯಾಸ ಆಗಿರಬಹುದು ಎಂದು ನುಡಿಯುತ್ತಾರೆ. ನಮ್ಮೆಲ್ಲಾ ಸಹೋದರರ ನಡುವೆ ಇಂದಿಗೂ ವ್ಯವಹಾರ ಒಟ್ಟಿಗೆ ಇದ್ದರೂ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವ್ಯವಹಾರವನ್ನು ವಿದ್ಯಾವಂತರಾದ ಕಾರಣ ನಾನು ಮತ್ತು 3ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದೇವೆ ಎಂದರೆ ಸರಿಯಲ್ಲ. 1970 ರಿಂದ ನಾನು, ನನ್ನ ತಂದೆ ಮತ್ತು ನಮ್ಮ ಸಹೋದರರು ಸಂಪಾದನೆ ಮಾಡಿದ ಆಸ್ತಿಗಳನ್ನು ಈ ದಾವೇಗೆ ಸೇರಿಸಿಲ್ಲ ಎಂದರೆ ಸರಿಯಲ್ಲ. ಈ ದಾವೇ ಹೂಡುವಾಗ ತೋರಿಸಿರುವ ನನ್ನ ವಿಳಾಸ ನನ್ನ ಮನೆಯೇ ಆಗಿರುತ್ತದೆ. ಸದರಿ ಮನೆ ನನ್ನ ಬಾಡಿಗೆ ಮನೆಯಾಗಿದೆ. ನನ್ನ ವಿಳಾಸದಲ್ಲಿ ಕೇರ್ ಆಫ್ ಎಂದು ತೋರಿಸಿಲ್ಲ. ಸದರಿ ಮನೆ ನನ್ನ ಸ್ವಂತ ಮನೆ ಎಂದರೆ ಸರಿಯಲ್ಲ.

2. 2ನೇ ಪ್ರತಿವಾದಿ ರೇಷ್ಮೇ ಹುಳು ಸಾಕಾಣೆ ಮತ್ತು ಬಾಳೆಯನ್ನು ಅತ್ತಿಮರಿಪಾಳ್ಯದ

ಜಮೀನಿನಲ್ಲಿ ಬೆಳೆಯುತ್ತಾರೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ತಾನು ದುಡಿದ ಆದಾಯವನ್ನು ನನಗೆ ಮತ್ತು 3ನೇ ಪ್ರತಿವಾದಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿಯಂತೆ ಆತ ನೀಡಿದ ಹಣದಿಂದ ಪ್ರತಿವಾದ ಪತ್ರದ 9ನೇ ಕಂಡಿಕೆಯಲ್ಲಿರುವ ಆಸ್ತಿಯನ್ನು ನಾನು ಮತ್ತು 3ನೇ ಪ್ರತಿವಾದಿ ಖರೀದಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಕುಟುಂಬದ ಇನ್ನೂ ಹಲವು ಆಸ್ತಿಗಳನ್ನು ಸೇರಿಸದೇ ನಾನು ಮತ್ತು 2ನೇ ಪ್ರತಿವಾದಿ ಶರೀಕಾಗಿ ಈ ದಾವೇ ಹೂಡಿರುತ್ತೇವೆ ಎಂದರೆ ಸರಿಯಲ್ಲ. ಬೆಂಗಳೂರಿನಲ್ಲಿರುವ ಮನೆಗಳನ್ನು ಕಟ್ಟಲು 2ನೇ ಪ್ರತಿವಾದಿ ಮರ, ಮರಳು ಮತ್ತು ಕಲ್ಲುಗಳನ್ನು ಹೊಂದಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಗಳಿಸಿದ ಆದಾಯವನ್ನು ನಮಗೆ ಕೊಟ್ಟು, ಈಗ ಸಾಲದಲ್ಲಿ ಬದುಕುತ್ತಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಎಲ್ಲಾ ಆಸ್ತಿಗಳಲ್ಲಿ ಸಮಾನವಾಗಿ ಭಾಗವಾದರೇ ನನಗೆ ತೊಂದರೆ ಇಲ್ಲ ಎಂದರೆ ಸಾಕ್ಷಿಯು ಊರಿನಲ್ಲಿರುವ ಆಸ್ತಿಗಳಲ್ಲಿ ಮಾತ್ರ ಎಂದು ನುಡಿಯುತ್ತಾರೆ.

3. ನಿಪಿ.7ರಲ್ಲಿ ಪಿತ್ರಾರ್ಜಿತ ಆಸ್ತಿಗಳನ್ನು ವಿಭಾಗ ಮಾಡಿಕೊಳ್ಳಲಾಗಿದೆ ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯು ಇದ್ದಿದ್ದನ್ನು ಮಾಡಿಕೊಳ್ಳಲಾಗಿದೆ ಎಂದು ನುಡಿಯುತ್ತಾರೆ. ನಿಪಿ.7ರಲ್ಲಿ 1970 ರಿಂದ ನಮ್ಮ ಕುಟುಂಬದಲ್ಲಿ ಸಂಪಾದಿಸಿದ ಆಸ್ತಿಗಳನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ.

4. ನನ್ನ ಸೋದರತ್ತೆಯಿಂದ ಆಸ್ತಿ ಬೇಡವೆಂದು ಬರೆಸಿಕೊಳ್ಳಲಾಗಿದೆಯೇ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು, ಅವರು ಪಾರಿಕತ್ ಸಮಯದಲ್ಲಿ ಬಿಟ್ಟು ಕೊಟ್ಟಿದ್ದರು ಎಂದು ನುಡಿಯುತ್ತಾರೆ. 1970 ರ ವಿಭಾಗ ಪತ್ರ 2ನೇ ಪ್ರತಿವಾದಿಯ ಬಳಿ ಇರುತ್ತದೆ. ಸದರಿ ವಿಚಾರವನ್ನು ನಮ್ಮ ವಕೀಲರಿಗೆ ಹೇಳಿರುವುದಿಲ್ಲ. 2ನೇ

ಪ್ರತಿವಾದಿಯ ಹತ್ತಿರ ಆ ರೀತಿ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ನನ್ನ ತಂದೆಯ ಒಡಹುಟ್ಟಿದವರನ್ನು ತೋರಿಸುವ ವಂಶವೃಕ್ಷ ಹಾಜರುಪಡಿಸಿಲ್ಲ ಎಂದರ ಸಾಕ್ಷಿಯು 3ನೇ ಪ್ರತಿವಾದಿಯು ನೀಡಿದ ದಾಖಲೆಗಳನ್ನು ತಾನು ಓದಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. 3ನೇ ಪ್ರತಿವಾದಿಯೇ ಈ ದಾವೇಯನ್ನು ತಯಾರು ಮಾಡಲು ಮಾಹಿತಿ ನೀಡಿ ತಯಾರು ಮಾಡಿಸಿದ್ದರು. ನಾನು ಮತ್ತು 3ನೇ ಪ್ರತಿವಾದಿ ವಕೀಲರಿಗೆ ದಾಖಲೆಗಳನ್ನು ನೀಡಿರುತ್ತೇನೆ.

5. ಈ ದಾವೇಯನ್ನು ನಾನು ಮತ್ತು 3ನೇ ಪ್ರತಿವಾದಿಯನ್ನು ಹೊರತುಪಡಿಸಿ 7 ಜನರ ವಿರುದ್ದ ಹೂಡಲಾಗಿದೆ. ಈ ದಾವೇಯನ್ನು ನಾನು ಮತ್ತು 3ನೇ ಪ್ರತಿವಾದಿ ಹೂಡಿರುತ್ತೇವೆ. 3ನೇ ಪ್ರತಿವಾದಿ ಭಾಗ ಕೊಡಬೇಕಾಗುತ್ತದೆ ಎಂದು ನನ್ನ ಮೂಲಕ ಈ ದಾವೇ ಹೂಡಿಸಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೇಯಲ್ಲಿ ಅವಶ್ಯಕ ಪಕ್ಷಗಾರರು ಮತ್ತು ಕುಟುಂಬದ ಆಸ್ತಿಗಳನ್ನು ಸೇರಿಸದ ಕಾರಣ, ಈ ದಾವೇ ವಜಾ ಆದರೆ ನನಗೆ ನಷ್ಟ ಇಲ್ಲ ಎಂದರೆ ಸರಿಯಲ್ಲ. ಕುಟುಂಬದ ಯಜಮಾನಿಕೆಯನ್ನು ನಾನು ಮತ್ತು 3ನೇ ಪ್ರತಿವಾದಿ ಮಾಡುತ್ತಿದ್ದರೂ ಎಲ್ಲರಿಗೂ ಎಲ್ಲಾ ಆಸ್ತಿಗಳಲ್ಲಿ ಭಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ದಾವೇ ಹೂಡಿರುತ್ತೇವೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ</u>**

*<u>( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)</u>*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.